MR. SPEAKER.— Be thankful to the small mercies ಎಂದ ಹಾಗೆ ಈಗ ಸದನವನ್ನು ಒಂದು ಗಂಟೆ ಕಾಲ ಮುಂದೂಡಿ ಮತ್ತೆ ೩-೦೦ ಗಂಟೆಗೆ ಸೇರೋಣ.

(ಸಭೆಯು ೩ ಗಂಟೆ ೪೦ ನಿಮಿಷಕ್ಕೆ ಮುಂದೆವ್ದು ಪುನಃ ೩-೨೦ ಗಂಟೆಗೆ ಸೇರಲು ನಿಶ್ಚಯಿಸಿತು)

The House reassembled again at 3.20 P.M.

(Hon'ble Speaker Sri S. M. KRISHNA in the Chair).

ANNOUNCEMENT

MR. SPEAKER.— Under Rule 9 of the Rules of Procedure and Conduct of Business in the Karnataka Legislative Assemblye I nominate the following Members to the Panel of Chairman for th current Session.

Sriyuths:

1) Smt. Suma Vasanth,
2) Blasius M. D'souza,
3) Smt. Nagamma Keshavamurthy,
4) Gurupadappa Nagmarpalli,
5) H. Ekantaiah,
6) A. M. Hindasgeri.

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯಂದ ಮೇಲಿನ ಚರ್ಚೆ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಂಠಕಲ್).— ಸನ್ಮಾನ್ಯ ಸಭಾಧ್ಯಕ್ಷರೇ, ಈಗಾಗಲೇ ಗೌವರ್ನರ್ ಆಡ್ರೆಸ್ ಮೇಲೆ ಅವರು ಮಾಡಿದಂತಹ ಭಾಷಣಕ್ಕೆ ವಂದನೆಯನ್ನು ಸಲ್ಲಿಸಬೇಕೆಂದು ಈ ಸದನದ ಸದಸ್ಯರ ವತಿಯಿಂದ ನಾನು ರೆಸಲ್ಯೂಷನ್ ಅನ್ನು ಮೂವ್ ಮಾಡಿದ್ದೇನೆ...

(ಶ್ರೀ ಬಿ.ಎಸ್. ಯಡಿಯೂರಪ್ಪನವರು ಮೆಲ್‌ನಿಂದ ಮಾತನಾಡುತ್ತಿದ್ದುದರಿಂದ ಮಾನ್ಯ ಸಭಾಧ್ಯಕ್ಷರ ಅಪ್ಪಣೆ ಮೇರೆಗೆ ಅವರು ಮಾತನಾಡಿದ್ದನ್ನು ರೆಕಾರ್ಡ್ ಮಾಡಲಿಲ್ಲ.)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅನೇಕ ಸಲ ಅವರಿಗೆ ಅವಕಾಶ ನೀಡಲಾಗಿದೆ.

ಶ್ರೀ ಸಿ. ಬೈರೇಗೌಡ.— ಅವಕಾಶ ಕೊಟ್ಟಿದ್ದರ್ಮಬಗ್ಗೆ.

ಅಧ್ಯಕ್ಷರು.— ಅವರು ಈಲ್ಡ್ ಆಗದಿದ್ದರೆ ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ, ಇವರು ಆದನ್ನು ಒಪ್ಪುತ್ತಿಲ್ಲ. ಇದರ ಅರ್ಥ ಏನು ಅಂದರೆ 'It is a tyranny of minority over the majority ಮೆಜಾರಿಟಿ ಜನರ ಮೇಲೆ ಇವರು ಒತ್ತಡ ತರುತ್ತಿದ್ದಾರೆ. ರೈತರ ಬಗ್ಗೆ ಆಸಕ್ತಿ ಯಾರಿಗೆ ಇಲ್ಲ. ನಮಗೂ ಇದೆ.

ಶ್ರೀ ಸಿ. ಬೈರೇಗೌಡ.— ನೀವು ಹೇಳಿದ್ದುದು ಮಾಡಿ ಎಂದು ನಾವು ಕೇಳುತ್ತಿರುವುದು. ನಾವು ಹೇಳಿದ್ದುದನ್ನು ನೀವು ಮಾಡಿ ಎಂದು ಕೇಳುತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಇವರು ಸಹ ಹಿಂದೆ ಅಧಿಕಾರದಲ್ಲಿದ್ದವರು. ಒಂದೇ ದಿವಸದಲ್ಲಿ ರೈತರ ಸಮಸ್ಯೆಗಳನ್ನು ಪರಿಹಾರ ಮಾಡಬೇಕೆಂದರೆ ಹೇಗೆ? ಇವೊತ್ತು ನಾವು ಚರ್ಚೆಗೆ ಸಿದ್ಧ ಇದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. ಆದರೆ ಕೇಳುವುದಕ್ಕೆ ತಾವು ತಯಾರಿಲ್ಲ...